262049

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

2019

ಪ್ರಶ್ನೆಪತ್ರಿಕೆ ವರ್ಷನ್ ಕೋಡ್

**A**

# ಪ್ರಶ್ನೆಪತ್ರಿಕೆ

# ಸಾಮಾನ್ಯ ಜ್ಞಾನ

## ಪತ್ರಿಕೆ - II

ಗರಿಷ್ಠ ಸಮಯ : 1½ ಗಂಟೆಗಳು | ವಿಷಯ ಸಂಕೇತ : **364** | ಗರಿಷ್ಠ ಅಂಕಗಳು : 150

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು.
2. ಅಭ್ಯರ್ಥಿಯು ಪ್ರಶ್ನೆಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆಪತ್ರಿಕೆಯಾದ ಮತ್ತು ಒ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಪಡೆಯತಕ್ಕದ್ದು.
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 7 | 0 | 1 | 2 | 8 | 8 | 9 |

4. **ಈ ಪ್ರಶ್ನೆಪತ್ರಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರಪತ್ರಿಕೆಯ ಮೇಲೆ ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ** ಮಾತ್ರ ಗುರುತು ಮಾಡಬೇಕು. ಒ.ಎಂ.ಆರ್. ಉತ್ತರಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. **ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ತಪ್ಪು ಉತ್ತರಕ್ಕೆ ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ 1/4th (0.25) ರಷ್ಟು ಅಂಕಗಳನ್ನು ಕಳೆಯಲಾಗುವುದು.**
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು. ಪ್ರಶ್ನೆಪತ್ರಿಕೆಯ ಪ್ರಶ್ನೆಗಳಲ್ಲಿ ಯಾವುದೇ ಗೊಂದಲಗಳಿದ್ದರೂ ಆಂಗ್ಲಭಾಷೆಯ ಪ್ರಶ್ನೆಗಳೇ ಅಂತಿಮವಾಗಿರುತ್ತದೆ.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್ / ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**



*Note : English version of the instructions is printed on the back cover of this booklet.*

downloaded from: www.kpscvaani.com
Scanned by CamScanner

1. ಆಶಾಳು ಕೆಲಸಕ್ಕಾಗಿ ಗಂಟೆಗೆ 48 ಕಿ.ಮೀ. ದಂತೆ ಸರಾಸರಿ ವೇಗದಲ್ಲಿ ಚಾಲನೆ ಮಾಡುತ್ತಾಳೆ. ಮೊದಲ ಶೇ. 60 ಭಾಗದ ದೂರವನ್ನು ಕ್ರಮಿಸಲು, ಉಳಿದ ದೂರವನ್ನು ಕ್ರಮಿಸಲು ಬೇಕಾದ ಸಮಯಕ್ಕಿಂತ 10 ನಿಮಿಷಗಳನ್ನು ಹೆಚ್ಚಾಗಿ ತೆಗೆದುಕೊಳ್ಳುತ್ತಾಳೆ. ಅವಳ ಕಛೇರಿಯು ಎಷ್ಟು ದೂರದಲ್ಲಿದೆ ?

(1) 30 ಕಿ.ಮೀ. (2) 40 ಕಿ.ಮೀ.
(3) 45 ಕಿ.ಮೀ. (4) 48 ಕಿ.ಮೀ.

2. ಒಬ್ಬ ವ್ಯಾಪಾರಿಯು 20 ರೂ.ಗಳಿಗೆ 22 ಪೆನ್ಸಿಲ್‌ಗಳನ್ನು ಕೊಳ್ಳುತ್ತಾನೆ ಮತ್ತು ಅವುಗಳನ್ನು 11 ರೂ.ಗಳಿಗೆ 10 ಪೆನ್ಸಿಲ್‌ಗಳ ದರದಲ್ಲಿ ಮಾರಾಟ ಮಾಡಿದನು. ಅವನ ಲಾಭದ ಶೇಕಡವಾರು

(1) 0%
(2) 20%
(3) 21%
(4) 22%

3. Z ನು Y ನ ಸಹೋದರ. V ಯು Y ನ ಮಗಳು. X ನು Z ನ ತಂದೆ. W ನು V ಯ ಸಹೋದರ. ಹಾಗಾದರೆ W ನ ಚಿಕ್ಕಪ್ಪನು

(1) Z (2) Y
(3) X (4) V

4. ಒಂದು ದೋಣಿ 32 km ಅಪ್‌ಸ್ಟ್ರೀಮ್ ಮತ್ತು 36 km ಡೌನ್‌ಸ್ಟ್ರೀಮ್‌ನ್ನು 7 ಗಂಟೆಗಳಲ್ಲಿ ಒಳಗೊಳ್ಳುತ್ತದೆ. ಅಲ್ಲದೆ 40 km ಅಪ್‌ಸ್ಟ್ರೀಮ್ ಮತ್ತು 48 km ಡೌನ್‌ಸ್ಟ್ರೀಮ್‌ನ್ನು 9 ಗಂಟೆಗಳಲ್ಲಿ ಒಳಗೊಳ್ಳುತ್ತದೆ. ಹಾಗಾದರೆ ನಿಂತ ನೀರಿನಲ್ಲಿ ದೋಣಿಯ ವೇಗವು ಕಿ.ಮೀ./ಗಂಟೆಗಳಲ್ಲಿ

(1) 6 (2) 8
(3) 10 (4) 0

5. ಲೈಫ್ ಆಫ್ ಪೈ ಅಥವಾ ಫೈಂಡಿಂಗ್ ನೆಮೋ ಎಂಬ ಚಿತ್ರವನ್ನು ಒಂದು ತರಗತಿಯ ವಿದ್ಯಾರ್ಥಿಗಳು ನೋಡಿದ್ದಾರೆ ಎಂದು ವಿಚಾರಣೆಯ ನಂತರ ತಿಳಿದು ಬಂದಿದೆ. ಈ ಎರಡು ಚಿತ್ರಗಳಲ್ಲಿ ಕನಿಷ್ಠ ಒಂದನ್ನಾದರೂ ಇಪ್ಪತ್ತು ವಿದ್ಯಾರ್ಥಿಗಳು ನೋಡಿದ್ದಾರೆಂದು ಕಂಡು ಬಂದಿದೆ. ಶೇ. 20 ವಿದ್ಯಾರ್ಥಿಗಳು ಈ ಎರಡು ಚಿತ್ರಗಳಲ್ಲಿ ಯಾವುದನ್ನೂ ನೋಡಿಲ್ಲ. ಹಾಗಾದರೆ ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ

(1) 24 (2) 25
(3) 36 (4) 40

6. ಈಗ ತಾಯಿಯ ಹಾಗೂ ಮಗಳ ವಯಸ್ಸಿನ ಅನುಪಾತ 19 : 5. 4 ವರ್ಷದ ನಂತರ ಈ ಅನುಪಾತ 3 : 1 ಆಗುವುದು. ಈಗ ತಾಯಿ ಮತ್ತು ಮಗಳ ವಯಸ್ಸಿನ ಮೊತ್ತ ಎಷ್ಟು ?

(1) 40 ವರ್ಷಗಳು
(2) 48 ವರ್ಷಗಳು
(3) 42 ವರ್ಷಗಳು
(4) ಯಾವುದೂ ಅಲ್ಲ

7. ಈ ಸರಣಿಯಲ್ಲಿ ತಪ್ಪಿ ಹೋಗಿರುವ ಅಂಕಿಯನ್ನು ಕಂಡು ಹಿಡಿಯಿರಿ.

| | | | |
|---|---|---|---|
| 3 | 5 | 8 | 7 |
| 4 | 6 | 4 | 6 |
| 5 | 2 | 2 | 3 |
| 58 | 58 | 62 | ? |

(1) 122 (2) 124
(3) 126 (4) 128



downloaded from: www.kpscvaani.com
Scanned by CamScanner

8. ಒಂದು ವೇಳೆ + ಅರ್ಥ ÷ ಆದರೆ, – ಅರ್ಥ × ಆದರೆ, ÷ ಅರ್ಥ + ಆದರೆ, × ಅರ್ಥ – ಆದರೆ, ಈ ಕೆಳಗಿನ ಯಾವ ಸಮೀಕರಣ ಸರಿಯಾಗಿದೆ ?

(1) $10 \div 5 - 4 \times 18 + 3 = 24$

(2) $10 - 2 \div 4 \times 10 + 5 = 32$

(3) $2 - 40 + 10 \div 6 \times 8 = 5$

(4) $20 \div 7 - 30 + 6 \div 2 = 43$

9. ಒಂದು ಪಾರ್ಟಿಯಲ್ಲಿ 8 ಜನರನ್ನು ಆಹ್ವಾನಿಸಲಾಯಿತು. ಪ್ರತಿಯೊಬ್ಬರು – ಒಬ್ಬರಿಗೊಬ್ಬರು ಹಸ್ತಲಾಘವ ಮಾಡುತ್ತಾರೆ ಹಾಗಾದರೆ ಹಸ್ತ ಲಾಘವಗಳ ಒಟ್ಟು ಸಂಖ್ಯೆ ಎಷ್ಟು ?

(1) 24 (2) 36

(3) 28 (4) 40

10. ಈ ಕೆಳಗಿನ ಚಿತ್ರಗಳಲ್ಲಿ ಯಾವುದು ಶಿಕ್ಷಕರ, ಪುರುಷರ ಮತ್ತು ಮಹಿಳೆಯರ ನಡುವಿನ ಸಂಬಂಧವನ್ನು ಪ್ರತಿನಿಧಿಸುತ್ತದೆ ?

(1)  (2) 

(3)  (4) 

11. ಈ ಕೆಳಗೆ ಕೊಟ್ಟಿರುವ ಚಿತ್ರದಲ್ಲಿ 3 ಕ್ಕೆ ವಿರುದ್ಧವಾಗಿರುವ ಸಂಖ್ಯೆ ಯಾವುದು ?




I II III IV

(1) 4 (2) 2

(3) 6 (4) 3

12. ಈ ಕೆಳಗಿನ ಪ್ರಶ್ನೆಯಲ್ಲಿ 2 ವಿಧದ ಅಂಶ-ಅಂಶಗಳಿವೆ.

(i) PROBLEM FIGURE ಅನ್ನು A, B, C, D ಎಂದು ಗುರುತಿಸಲಾಗಿದೆ.

(ii) ANSWER FIGURE ನ್ನು (1), (2), (3), (4) ಎಂದು ಗುರುತಿಸಲಾಗಿದೆ. ನೀವು ANSWER FIGURE ನಿಂದ ಒಂದು ಚಿತ್ರವನ್ನು ಆರಿಸಬೇಕಾಗುತ್ತದೆ, ಅದು PROBLEM FIGURE ನ ಸರಣಿಯನ್ನು ಮುಂದುವರಿಸಬೇಕು.

PROBLEM FIGURE.



A B C D

ANSWER FIGURE



(1) (2) (3) (4)

13. ಭೂಮಿಯ ಮೇಲೆ ವಿಮೋಚನಾ ವೇಗವು

(1) $11.2\ kms^{-1}$

(2) $11.2\ kms^{-2}$

(3) $11.2\ cms^{-1}$

(4) $11.2\ ms^{-1}$

14. ವಿಮಾನದ ರೆಕ್ಕೆಗಳ ಆಕಾರವನ್ನು ಕೆಳಗಿನ ಯಾವ ತತ್ವದ ಆಧಾರದ ಮೇಲೆ ರೂಪಿಸಲಾಗಿದೆ ?

(1) ನ್ಯೂಟನ್‌ನ ತತ್ವ

(2) ಕೆಪ್ಲರ್‌ನ ತತ್ವ

(3) ಬರ್ನೋಲಿಯ ತತ್ವ

(4) ಪಾಸ್ಕಲ್‌ನ ತತ್ವ



downloaded from: www.kpscvaani.com
Scanned by CamScanner

15. ನೀತಿ ಆಯೋಗದ ಮೊದಲನೇ ಉಪಾಧ್ಯಕ್ಷರು ಯಾರು ?

(1) ಅರವಿಂದ್ ಪನಗರಿಯಾ

(2) ಮನ್‌ಮೋಹನ್ ಸಿಂಗ್

(3) ಎಸ್.ಎಮ್. ಕೃಷ್ಣ

(4) ಮಾಂಟೆಕ್ ಸಿಂಗ್ ಅಹ್ಲುವಾಲಿಯಾ

16. 1976 ರ 42 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯು ಪ್ರಸ್ತಾವನೆಗೆ ಈ ಪದಗಳನ್ನು ಸೇರಿಸಿತು

(1) ಸ್ವತಂತ್ರ ಮತ್ತು ಸ್ವಾಯತ್ತ

(2) ಫೆಡರಲ್ ಮತ್ತು ಪಾರ್ಲಿಮೆಂಟರಿ

(3) ಸಮಾಜವಾದಿ ಮತ್ತು ಜಾತ್ಯಾತೀತ

(4) ದ್ವಿ– ಸದನ ಮತ್ತು ಒಗ್ಗೂಡಿಕೆ

17. ಭಾರತದ ಸಂವಿಧಾನದ 233 ನೇ ಕಲಮಿನ ಮೇರೆಗೆ ಜಿಲ್ಲಾ ನ್ಯಾಯಾಧೀಶರು ಇವರಿಂದ ಆಯ್ಕೆಯಾಗುತ್ತಾರೆ

(1) ಸರ್ವೋಚ್ಚ ನ್ಯಾಯಾಲಯದ ಸಮಾಲೋಚನೆಯೊಂದಿಗೆ – ರಾಜ್ಯಪಾಲರು

(2) ಉಚ್ಚ ನ್ಯಾಯಾಲಯದ ಸಮಾಲೋಚನೆಯೊಂದಿಗೆ – ರಾಜ್ಯಪಾಲರು

(3) ಜಿಲ್ಲಾ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಮಾಲೋಚನೆಯೊಂದಿಗೆ – ರಾಜ್ಯಪಾಲರು

(4) ರಾಜ್ಯ ಸರ್ಕಾರ ಮತ್ತು ಕಾನೂನು ಮಂತ್ರಿಗಳ ಸಮಾಲೋಚನೆಯೊಂದಿಗೆ – ರಾಜ್ಯಪಾಲರು

18. 322 ನೇ ಕಲಮಿನ ಮೇರೆಗೆ ಕೇಂದ್ರ ಲೋಕ ಸೇವಾ ಆಯೋಗದ ಎಲ್ಲಾ ವೆಚ್ಚಗಳು ಇವರಿಂದ ಭರಿಸಲ್ಪಡುತ್ತವೆ.

(1) ಭಾರತದ ಸಾದಿಲ್ವಾರು ನಿಧಿ

(2) ಭಾರತದ ಸಂಚಿತ (ಕ್ರೋಢೀಕೃತ) ನಿಧಿ

(3) ಭಾರತದ ಖಜಾನೆ ನಿಧಿ

(4) ಭಾರತದ ಪ್ರತ್ಯೇಕ ಕೇಂದ್ರ ಲೋಕ ಸೇವಾ ಆಯೋಗ ನಿಧಿ

19. 'ಮಿತಾಕ್ಷರ' ಗ್ರಂಥವನ್ನು ಬರೆದ ಕವಿ

(1) ಬಿಲ್ಹಣ

(2) ವಿಜ್ಞಾನೇಶ್ವರ

(3) ಮೂರನೇ ಸೋಮೇಶ್ವರ

(4) ಎರಡನೇ ಸಿಂಗಣ

20. ಈ ಕೆಳಗಿನ ಯಾವ ಅರಸನಿಗೆ 'ಜಗದ್ಗುರು' ಎಂಬ ಅಡ್ಡಹೆಸರನ್ನು ಇಡಲಾಗಿತ್ತು ?

(1) ಅಳಿಯ ರಾಮರಾಯ

(2) ಮೂರನೇ ಬಲ್ಲಾಳ

(3) II ನೇ ಇಬ್ರಾಹಿಂ ಆದಿಲ್ ಶಾ

(4) ಅಲಿ ಆದಿಲ್ ಶಾ

21. ಅಷ್ಟಮಠ ಸಂಪ್ರದಾಯವನ್ನು ಪ್ರಾರಂಭಿಸಿದವರು

(1) ಮಧ್ವಾಚಾರ್ಯ

(2) ಶಂಕರಾಚಾರ್ಯ

(3) ರಾಮಾನುಜಾಚಾರ್ಯ

(4) ರೇಣಾಕಾಚಾರ್ಯ



downloaded from: www.kpscvaani.com

Scanned by CamScanner

22. ರೈತವಾರಿ ಪದ್ಧತಿಯು ಪ್ರಾರಂಭದಲ್ಲಿ ______ ರಾಜ್ಯದಲ್ಲಿ ಪರಿಚಯಿಸಲ್ಪಟ್ಟಿತು ಮತ್ತು ನಂತರ ಮಹಾರಾಷ್ಟ್ರ, ಪೂರ್ವ ಪಂಜಾಬು, ಅಸ್ಸಾಂ ಮತ್ತು ಕೂರ್ಗ್‌ಗಳಿಗೆ ವಿಸ್ತರಿಸಲ್ಪಟ್ಟಿತು.

(1) ತಮಿಳುನಾಡು (2) ಕರ್ನಾಟಕ

(3) ಕೇರಳ (4) ಮಧ್ಯಪ್ರದೇಶ

23. ಭೂ ದಿನ ವನ್ನು ಪ್ರತಿ ವರ್ಷ ಆಚರಿಸುವ ದಿನಾಂಕ

(1) ಜೂನ್ 5 ರಂದು

(2) ಏಪ್ರಿಲ್ 22 ರಂದು

(3) ಜನವರಿ 26 ರಂದು

(4) ಮಾರ್ಚ್ 22 ರಂದು

24. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿರಿ.

| ಪಟ್ಟಿ – I (ಶಕ್ತಿ ಆಕರ/ಮೂಲ) | ಪಟ್ಟಿ – II (ಪ್ರಕ್ರಿಯೆಗಳು/ಮಿತಿಗಳು) |
|---|---|
| a. ತೈಲ ಶೇಲ್ | I. ನೆಲದಡಿಯ ಶಾಖ |
| b. ಸೌರ | II. Harnessing ಸಮಸ್ಯೆಯನ್ನು ನಿವಾರಿಸುವುದು |
| c. ಮಾರುತ | III. ಪರಿಸರಾತ್ಮಕವಾಗಿ ಶಕ್ತಿಯ ಶುದ್ಧ ಆಕರ |
| d. ಭೂಗರ್ಭಉಷ್ಣ (ಜಿಯೋಥರ್ಮಲ್) | IV. ಪೆಟ್ರೋಲಿಯಂ ನಂತಹ ಇಂಧನ |

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | a | b | c | d |
|---|---|---|---|---|
| (1) | I | II | III | IV |
| (2) | II | III | IV | I |
| (3) | IV | III | II | I |
| (4) | III | IV | II | I |

25. ಕರ್ನಾಟಕವು ಗರಿಷ್ಠ ಮಳೆಯನ್ನು ಇಲ್ಲಿಂದ ಪಡೆಯುವುದು

(1) ಈಶಾನ್ಯ ಮಾನ್ಸೂನ್ ನಿಂದ

(2) ವಾಯುವ್ಯ ಮಾನ್ಸೂನ್ ನಿಂದ

(3) ಆಗ್ನೇಯ ಮಾನ್ಸೂನ್ ನಿಂದ

(4) ನೈರುತ್ಯ ಮಾನ್ಸೂನ್ ನಿಂದ

26. ಭಾರತದಲ್ಲಿನ ಅತ್ಯಂತ ಗಂಡಾಂತರ-ಕ್ಕೊಳಗಾಗಿರುವ ಪಕ್ಷಿಗಳಲ್ಲೊಂದು

(1) ದುಂಬಿ – ಭಕ್ಷಕ

(2) ಪ್ಯಾರಡೈಸ್ ಚಿಟ್ಟೆ ನೊಣ ಹಿಡಿಯುವ

(3) ಗ್ರೇಟ್ ಇಂಡಿಯನ್ ಬಸ್ಟರ್ಡ್

(4) ಗೂಬೆ

27. ಭಾರತೀಯ ಸಂವಿಧಾನದ ಯಾವ ಕಲಮು ಭಾರತವನ್ನು ರಾಜ್ಯಗಳ ಒಕ್ಕೂಟವೆಂದು ಘೋಷಿಸಿದೆ ?

(1) ಕಲಮು - 1 (2) ಕಲಮು - 2

(3) ಕಲಮು - 3 (4) ಕಲಮು - 4

28. 1960 ರಲ್ಲಿ ಡಾ. ಆರ್. ನಾಗೇಗೌಡರ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡಿದ ಮುಖ್ಯಮಂತ್ರಿ ಯಾರು ?

(1) ವೀರೇಂದ್ರ ಪಾಟೀಲರು

(2) ಎಸ್. ನಿಜಲಿಂಗಪ್ಪನವರು

(3) ಡಿ. ದೇವರಾಜ ಅರಸುರವರು

(4) ಆರ್. ಗುಂಡೂರಾವ್

29. ಪ್ರಥಮ ವೇದ ಯಾವುದು ?

(1) ಯಜುರ್ ವೇದ (2) ಸಾಮವೇದ

(3) ಅಥರ್ವವೇದ (4) ಋಗ್ವೇದ



downloaded from: www.kpscvaani.com

Scanned by CamScanner

30. ಪ್ರಾಗೈತಿಹಾಸಿಕ ನೆಲೆಯಾದ ಸಂಗನಕಲ್ಲು ಇಲ್ಲಿ ಇರುವುದು

(1) ರಾಯಚೂರು ಜಿಲ್ಲೆ

(2) ಮಂಡ್ಯ ಜಿಲ್ಲೆ

(3) ಕೋಲಾರ ಜಿಲ್ಲೆ

(4) ಬಳ್ಳಾರಿ ಜಿಲ್ಲೆ

31. ಎರಡು ತರೈನ್‌ನ ಕಾಳಗಗಳು ಮಹಮ್ಮದ್ ಘೋರಿ ಮತ್ತು ________ ರ ನಡುವೆ ನಡೆಯಿತು.

(1) ಮಹಮ್ಮದ್ ಘಜ್ನಿ

(2) 3ನೇ ಪೃಥ್ವೀರಾಜ್

(3) ಮೀರ್ ಕಾಸಿಂ

(4) ಕುತುಬ್-ದಿನ್-ಐಬಕ್

32. ರಜಿಯಾ ಸುಲ್ತಾನಾ ಯಾರ ಮಗಳು ?

(1) ಬಲ್ಬನ್

(2) ಇಲ್ತುಮಿಷ್

(3) ಕುತುಬುದ್ದೀನ್ ಐಬಕ್

(4) ಬಾಬರ್

33. ತಾಳಿಕೋಟೆ ಯುದ್ಧ ಯಾರ ನಡುವೆ ನಡೆಯಿತು ?

(1) ರಾಮರಾಯ ಮತ್ತು ಬಹಮನಿ ಸುಲ್ತಾನರು

(2) ಕೃಷ್ಣದೇವರಾಯ ಮತ್ತು ಆದಿಲ್ ಷಾಹಿ ಸುಲ್ತಾನರು

(3) ರಾಮರಾಯ ಮತ್ತು ಗಜಪತಿ ಸುಲ್ತಾನರು

(4) ಇವುಗಳಲ್ಲಿ ಯಾವುದೂ ಅಲ್ಲ

34. ಕೃಷ್ಣದೇವರಾಯನು ಯಾವ ರಾಜ್ಯದ ಮೇಲಿನ ವಿಜಯದ ಸ್ಮರಣಾರ್ಥವಾಗಿ ಬಾಲಕೃಷ್ಣ ದೇವಾಲಯವನ್ನು ನಿರ್ಮಿಸಿದನು ?

(1) ಗೋವಾ (2) ಉದಯಗಿರಿ

(3) ಕೃಷ್ಣಗಿರಿ (4) ಬಿಜಾಪುರ

35. ಜನರಲ್ ಡೈಯರ್‌ನನ್ನು ಲಂಡನ್‌ನಲ್ಲಿ ಹತ್ಯೆಗೈದವರು ಯಾರು ?

(1) ಕರಣ್ ಸಿಂಗ್

(2) ಉಧಮ್ ಸಿಂಗ್

(3) ಬ್ರಿಟಿಷ್ ಸೈನಿಕ

(4) ಚಾರ್ಲ್ಸ್

36. ಅಲ್ಲಾವುದ್ದೀನ್ ಖಿಲ್ಜಿಯ ಸೈನಿಕ ದಂಡನಾಯಕ ಯಾರು?

(1) ಮಲ್ಲಿಕಾಫರ್ (2) ತೇಜ್ ಪಾಲ್

(3) ಘಾಜಿ ಮಲ್ಲಿಕ್ (4) ಅಲ್ಬೆರೂನಿ

37. ವಿಶ್ವಸಂಸ್ಥೆ ಅಸ್ತಿತ್ವಕ್ಕೆ ಬಂದದ್ದು

(1) 1495

(2) 1954

(3) 1964

(4) 1945

38. ಇವುಗಳನ್ನು ಹೊಂದಿಸಿ :

| | ಕೇಪ್ | ದೇಶ |
|---|---|---|
| a. | ನಾರ್ತ್ ಕೇಪ್ | I. ಚಿಲಿ |
| b. | ಕೇಪ್ ಹಾರ್ನ್ | II. ಸೆನೆಗಲ್ |
| c. | ಕೇಪ್ ವೆರ್ಡೆ | III. ಆಸ್ಟ್ರೇಲಿಯಾ |
| d. | ಕೇಪ್ ಯಾರ್ಕ್ | IV. ನಾರ್ವೆ |

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | a | b | c | d |
|---|---|---|---|---|
| (1) | III | IV | II | I |
| (2) | II | III | I | IV |
| (3) | I | IV | II | III |
| (4) | IV | I | II | III |



downloaded from: www.kpscvaani.com
Scanned by CamScanner

39. ಅಬುಲ್ ಫಜಲ್ ಬರೆದ ಸಾಹಿತ್ಯಿಕ ಕೃತಿ

(1) ಬಾಬರ್ ನಾಮಾ

(2) ಅಕ್ಬರ್ ನಾಮಾ

(3) ಹುಮಾಯೂನ್ ನಾಮಾ

(4) ಜಹಾಂಗೀರ್ ನಾಮಾ

40. ದಕ್ಷಿಣ ಅಮೇರಿಕಾದ ಪಶ್ಚಿಮ ತೀರದಲ್ಲಿ ಹರಿಯುವ ಶೀತೋದಕ ಸಾಗರ ಪ್ರವಾಹ

(1) ಎಲ್ ನಿನೋ ಪ್ರವಾಹ

(2) ಹಂಬೋಲ್ಟ್ ಪ್ರವಾಹ

(3) ಫಾಕ್‌ಲ್ಯಾಂಡ್ ಪ್ರವಾಹ

(4) ಕೇಪ್ ಹಾರ್ನ್ ಪ್ರವಾಹ

41. ಈ ಕೆಳಗಿನವುಗಳಲ್ಲಿ ಕೃಷ್ಣದೇವರಾಯನು ಸಂಸ್ಕೃತದಲ್ಲಿ ಬರೆದ ಕೃತಿ ಯಾವುದು ?

(1) ಉಷಾ ಪರಿಣಯಮ್

(2) ಅಮುಕ್ತ ಮಾಲ್ಯದ

(3) ಮನುಚರಿತಮು

(4) ಮಧುರಾ ವಿಜಯಮ್

42. ಗಾಂಧಿ – ಇರ್ವಿನ್ ಒಪ್ಪಂದಕ್ಕೆ ಯಾವಾಗ ಸಹಿ ಹಾಕಲಾಯಿತು ?

(1) 1932

(2) 1931

(3) 1935

(4) 1922

43. ಕನಿಷ್ಕನ ರಾಜಧಾನಿ ಯಾವುದಾಗಿತ್ತು ?

(1) ಕಾಶ್ಮೀರ

(2) ಪುರುಷಪುರ

(3) ಪಾಟಲಿಪುತ್ರ

(4) ಮಥುರಾ

44. ವಿಕ್ರಮಶಿಲಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದವರು ಯಾರು ?

(1) ಧರ್ಮಪಾಲ

(2) ನಾಗಭಟ್ಟ

(3) ದೇವಪಾಲ

(4) ಕುಮಾರಗುಪ್ತ

45. 1962 ರ ಭಾರತ – ಚೀನಾ ಯುದ್ಧದ ಅವಧಿಯಲ್ಲಿ ಭಾರತದ ರಕ್ಷಣಾ ಮಂತ್ರಿಯಾಗಿದ್ದವರು ಯಾರು ?

(1) ಗೋವಿಂದ್ ವಲ್ಲಭ್ ಪಂಥ್

(2) ವಿ.ಕೆ. ಕೃಷ್ಣ ಮೆನನ್

(3) ಜಗಜೀವನ್ ರಾಮ್

(4) ಶ್ಯಾಂಜೀ ಕೃಷ್ಣವರ್ಮ

46. ಬ್ರಿಟಿಷ್ ಭಾರತದ ರಾಜಧಾನಿಯು ಕಲ್ಕತ್ತಾದಿಂದ ದೆಹಲಿಗೆ ವರ್ಗಾಯಿಸಲ್ಪಟ್ಟಾಗ ಭಾರತದ ವೈಸರಾಯ್ ಆಗಿದ್ದವರು ಯಾರು ?

(1) ಲಾರ್ಡ್ ಕರ್ಜನ್

(2) ಲಾರ್ಡ್ ಹಾರ್ಡಿಂಗ್

(3) ಲಾರ್ಡ್ ಡಾಲ್‌ಹೌಸಿ

(4) ಲಾರ್ಡ್ ವಿಲಿಯಂ ಬೆಂಟಿಂಕ್



downloaded from: www.kpscvaani.com

Scanned by CamScanner

47. ಈ ಕೆಳಗಿನ ಯಾವ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ದುರ್ಗಾಪುರ್, ಭಿಲಾಯ್ ಮತ್ತು ರೂರ್ಕೆಲಾ ಸ್ಥಾವರುಗಳು ಸ್ಥಾಪನೆಯಾದವು ?

(1) 1ನೇ

(2) 2ನೇ

(3) 3ನೇ

(4) 4ನೇ

48. CAMPCO ಎಂಬುದು ಇದರ ತಯಾರಿಕೆಯಲ್ಲಿ ಸಹಕಾರಿಯಾಗಿದೆ

(1) ತೆಂಗು

(2) ಅಡಿಕೆ

(3) ಹೊಗೆಸೊಪ್ಪು

(4) ಇವುಗಳಲ್ಲಿ ಎಲ್ಲವೂ

49. ವಿದ್ಯುತ್ ನ ಏಕಮಾನವು

(1) ಜೌಲ್

(2) ಜೌಲ್ ಸೆಕೆಂಡ್

(3) ಹರ್ಟ್ಜ್ ಸೆಕೆಂಡ್

(4) ವಾಟ್

50. ಈ ಕೆಳಗಿನ ಯಾವ ದೇಶವು OPEC ದ ಸದಸ್ಯನಾಗಿಲ್ಲ?

(1) ಆಲ್ಜೀರಿಯಾ

(2) ಬ್ರೆಜಿಲ್

(3) ಈಕ್ವೆಡಾರ್

(4) ನೈಜೀರಿಯಾ

51. ಇಲ್ಲಿಯವರೆಗೂ ಭಾರತದಲ್ಲಿ ಎಷ್ಟು ಬಾರಿ ಹಣಕಾಸಿನ ತುರ್ತುಪರಿಸ್ಥಿತಿಗಳನ್ನು ಘೋಷಿಸಲಾಗಿದೆ ?

(1) ಒಂದು ಬಾರಿ

(2) ಎರಡು ಬಾರಿ

(3) ಮೂರು ಬಾರಿ

(4) ಎಂದೂ ಇಲ್ಲ

52. ಈ ಕೆಳಕಂಡ ಯಾವ ವಲಯದಲ್ಲಿ ಭಾರತೀಯ ಆರ್ಥಿಕತೆಯನ್ನು ಸುಧಾರಿಸಲು ಕೇಳ್ಕರ್ ಸಮಿತಿಯು ರಚಿತವಾಯಿತು ?

(1) ಕೃಷಿ ವಲಯ

(2) ಕೈಗಾರಿಕಾ ವಲಯ

(3) ತೆರಿಗೆ ವಲಯ

(4) ಬ್ಯಾಂಕಿಂಗ್ ಮತ್ತು ಹಣಕಾಸಿನ ವಲಯ

53. 14 ನೇ ಹಣಕಾಸು ಆಯೋಗದ ಅವಧಿಯು

(1) 2007-2012

(2) 2010-2015

(3) 2012-2017

(4) 2015-2020

54. CAPART ವು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

(1) ಕಂಪ್ಯೂಟರ್ ಯಂತ್ರಾಂಶ (ಹಾರ್ಡ್‌ವೇರ್)

(2) ರಫ್ತು ವೃದ್ಧಿಯ ಸಮಾಲೋಚಕಾ ಸೇವೆ

(3) ಮಾಲಿನ್ಯ ನಿಯಂತ್ರಣ

(4) ಗ್ರಾಮೀಣ ಅಭಿವೃದ್ಧಿ



downloaded from: www.kpscvaani.com
Scanned by CamScanner

55. ಚುನಾವಣಾ ಸುಧಾರಣೆಗಳಿಗೆ ಈ ಕೆಳಗಿನ ಯಾವ ಸಮಿತಿ/ಗಳು ಸಂಬಂಧಿಸಿವೆ ?

A. ಗೋಸ್ವಾಮಿ ಸಮಿತಿ

B. ಇಂದ್ರಜೀತ್ ಗುಪ್ತಾ ಸಮಿತಿ

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ವು ಸರಿಯಾಗಿದೆ ? ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

(1) A ಮಾತ್ರ

(2) B ಮಾತ್ರ

(3) A ಮತ್ತು B ಗಳೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

56. ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ರಚಿಸಲ್ಪಟ್ಟ Y.H. ಮಳೆಗಂ ಸಮಿತಿಯು ಈ ಕೆಳಗಿನ ಯಾವುದರೊಂದಿಗೆ ಸಂಬಂಧಿಸಿದೆ ?

(1) ಆದ್ಯತಾ ವಲಯ ಸಾಲ ನೀಡಿಕೆ ಕುರಿತಾದ ಸುಧಾರಣೆಗಳು

(2) ಬ್ಯಾಂಕ್‌ಗಳ ಸಾಂಘಿಕ ಸಾಮಾಜಿಕ ಹೊಣೆಗಾರಿಕೆಗಳು

(3) ಕೆಟ್ಟ ಸಾಲಗಳು, ವಂಚನೆಯ ಕಾರಣಗಳ ನಿರ್ವಹಣೆ

(4) ಗುಪ್ತ ಹಣ ಚಲಾವಣೆ

57. ಭಾರತವು ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ G-77 ಎಂಬುದು ಬೃಹತ್ ಅಂತರ್ ಸರ್ಕಾರಗಳ ಸಂಘಟನೆಯಾಗಿದೆ. ಈ ಕೆಳಗಿನ ಯಾವ ದೇಶವು G-77 ರ ಅಧ್ಯಕ್ಷತೆಯನ್ನು ತೆಗೆದುಕೊಂಡಿದೆ ?

(1) ಭಾರತ (2) ಈಜಿಪ್ಟ್

(3) ಪ್ಯಾಲಿಸ್ತೀನ್ ರಾಜ್ಯ (4) ಬುರುಂಡಿ

58. (ಪಟ್ಟಿ-I ರಲ್ಲಿನ) ಉತ್ಸವಗಳು/ಘಟನೆಗಳನ್ನು (ಪಟ್ಟಿ-II) ರಲ್ಲಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಹೊಂದಿಸಿರಿ. :

| ಪಟ್ಟಿ – I (ಉತ್ಸವಗಳು/ಘಟನೆಗಳು) | ಪಟ್ಟಿ – II (ರಾಜ್ಯ/ಕೇಂದ್ರಾಡಳಿತ ಪ್ರದೇಶ) |
|---|---|
| A. ಜಲ್ ಮಹೋತ್ಸವ | I. ನಾಗಾಲ್ಯಾಂಡ್ |
| B. ಹಾರ್ನ್‌ಬಿಲ್ | II. ಮಧ್ಯಪ್ರದೇಶ |
| C. ಕಂಬಳ | III. ಒರಿಸ್ಸಾ |
| D. ನೂವಾಕ್ಯಾ | IV. ಕರ್ನಾಟಕ |

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | A | B | C | D |
|---|---|---|---|---|
| (1) | I | II | III | IV |
| (2) | II | I | IV | III |
| (3) | I | II | IV | III |
| (4) | II | III | I | IV |

59. ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| A. ಜಿ.ಕೆ. ಗೋಖಲೆ | I. ಪ್ರಾರ್ಥನಾ ಸಮಾಜ |
| B. ಹೆನ್ರಿ ಡೆರುಜಿಯೋ | II. ಆತ್ಮೀಯ ಸಭಾ |
| C. ಆತ್ಮರಾಂ ಪಾಂಡುರಂಗ್ | III. ಶೈಕ್ಷಣಿಕ ಸಂಘ |
| D. ರಾಜಾರಾಂ ಮೋಹನ್ ರಾಯ್ | IV. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ |

ಮೇಲಿನವುಗಳಲ್ಲಿ ಯಾವುದು/ವು ಸರಿಯಾಗಿದೆ ? ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | A | B | C | D |
|---|---|---|---|---|
| (1) | IV | III | I | II |
| (2) | IV | III | II | I |
| (3) | I | III | II | IV |
| (4) | III | II | I | IV |



downloaded from: www.kpscvaani.com
Scanned by CamScanner

60. 2019 ರ ಏಷ್ಯಾ ಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಇತ್ತೀಚೆಗೆ ಜಯ ಗಳಿಸಿದ ದೇಶ ಯಾವುದು ?
(1) ಜಪಾನ್ (2) ಕತಾರ್
(3) ಇರಾನ್ (4) ಸಿಂಗಾಪುರ್

61. ಬೆಂಗಳೂರಿನ ಯಲಹಂಕಾದ ವಾಯು ದಳ ತಾಣದಲ್ಲಿ ನಡೆಯಲಿರುವ ಏರೋ ಇಂಡಿಯಾದ 12 ನೇ ಆವೃತ್ತಿಯ ಪ್ರದರ್ಶನದ ಆಶಯವೇನು ?
(1) ಬಿಲಿಯನ್ ಅವಕಾಶಗಳಿಗೆ ರನ್ ವೇ
(2) ಏರ್–ಅನ್ ಲಿಮಿಟೆಡ್ (ಅಪರಿಮಿತ ಗಾಳಿ)
(3) ಮಿಲಿಯನ್ ಅವಕಾಶಗಳಿಗೆ ರನ್ ವೇ
(4) ಏರ್ ವಾರಿಯರ್‌ಗಳು (ವಾಯುಯೋಧರು)

62. ಇತ್ತೀಚೆಗೆ ಆಯವ್ಯಯದ ಪದ್ಧತಿಗಳ ಮೇಲೆ ಒಂದು ಸಮೀಕ್ಷೆಯನ್ನು ಪಾರದರ್ಶಕತೆ ಇಂಟರ್‌ನ್ಯಾಷನಲ್ (ಅಂತರರಾಷ್ಟ್ರೀಯ) ಕೈಗೊಂಡಿದ್ದು, ಅದರಲ್ಲಿ ಭಾರತದ ಯಾವ ರಾಜ್ಯವು ಅಗ್ರಸ್ಥಾನವನ್ನು ಗಳಿಸಿತು ?
(1) ಕರ್ನಾಟಕ
(2) ಆಂಧ್ರ ಪ್ರದೇಶ
(3) ಮಹಾರಾಷ್ಟ್ರ
(4) ಮಧ್ಯ ಪ್ರದೇಶ

63. ಭಾರತೀಯ ಫ್ಲಾಗ್‌ಶಿಪ್ ಹೈಡ್ರೋಕಾರ್ಬನ್ ಸಮಾವೇಶ PETROTECH ವು 2019 ರಲ್ಲಿ ಇತ್ತೀಚೆಗೆ ಯಾವ ಸ್ಥಳದಲ್ಲಿ ಜರುಗಿತು ?
(1) ಕೋಲ್ಕತ್ತಾ
(2) ಬೆಂಗಳೂರು
(3) ನವ ದೆಹಲಿ
(4) ಮುಂಬಯಿ

64. ಪದ್ಮಶ್ರೀಯ ಗೌರವಕ್ಕೆ ಪಾತ್ರರಾದ ಪ್ರಥಮ ಭಾರತೀಯ ಮಂಗಳಮುಖಿ ಯಾರು ?
(1) ನರ್ತಕಿ ನಟರಾಜ್
(2) ಜೀವನ್ ಲಾಲ್
(3) ಅನಿಲ್ ಕುಟುಂಬೆ
(4) ಆರ್.ವಿ. ರಮಣಿ

65. ಪಾಕಿಸ್ತಾನದ ಪ್ರಥಮ ಹಿಂದೂ ಮಹಿಳಾ ನ್ಯಾಯಾಧೀಶರು ಯಾರು ?
(1) ಸುನೀತಾ ಪಟೇಲ್
(2) ಪಲ್ಲವಿ ಜೈನ್
(3) ಸುಮನ್ ಕುಮಾರಿ
(4) ಮೀನಾ ನಟರಾಜ್

66. 2019 ರ ಆಸ್ಟ್ರೇಲಿಯಾದ ಓಪನ್ ಟೆನ್ನಿಸ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್‌ನಲ್ಲಿ ಗೆದ್ದವರು ಯಾರು ?
(1) ರೋಜರ್ ಫೆಡರರ್
(2) ರ್‍ಯಾಫೆಲ್ ನಡಲ್
(3) ನೋವಕ್ ಝೋಕೊವಿಕ್
(4) ಆ್ಯಂಡಿ ಮುರ್ರೇ

67. IRCTC ಯು ಇತ್ತೀಚೆಗೆ ಅಖಿಲ ಭಾರತ ಮಟ್ಟದಲ್ಲಿ ಒಂದು ಸ್ವಚ್ಛತಾ ಸಮೀಕ್ಷೆಯನ್ನು ಕೈಗೊಂಡಿದ್ದು, ಈ ಸಮೀಕ್ಷೆಯಲ್ಲಿ ಕೆಳಗಿನ ಯಾವ ರೈಲ್ವೆ ವಲಯವು ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿತು ?
(1) ಉತ್ತರದ ರೈಲ್ವೆ
(2) ಮಧ್ಯ ರೈಲ್ವೆ
(3) ದಕ್ಷಿಣ ರೈಲ್ವೆ
(4) ನೈರುತ್ಯ ರೈಲ್ವೆ


downloaded from: www.kpscvaani.com
Scanned by CamScanner

**68.** ವಿಶ್ವ ಪರಂಪರೆ ಕೇಂದ್ರವನ್ನು ಈ ಕೆಳಗಿನ ಯಾವ ಸ್ಥಳದಲ್ಲಿ ಸ್ಥಾಪಿಸಲು ಪ್ರಸ್ತಾವಿಸಲಾಗಿದೆ ?

(1) ಚೆನ್ನೈ

(2) ನವ ದೆಹಲಿ

(3) ಕೋಲ್ಕತ್ತಾ

(4) ಮುಂಬಯಿ

**69.** ವಿಶ್ವ ಕ್ಯಾನ್ಸರ್ ದಿನವನ್ನು ಈ ಕೆಳಗಿನ ಯಾವ ದಿನಾಂಕದಂದು ಆಚರಿಸಲಾಗುವುದು ?

(1) 1 ನೇ ಫೆಬ್ರವರಿ

(2) 2 ನೇ ಫೆಬ್ರವರಿ

(3) 3 ನೇ ಫೆಬ್ರವರಿ

(4) 4 ನೇ ಫೆಬ್ರವರಿ

**70.** ಪ್ರತಿ ವರ್ಷವೂ 2ನೇ ಫೆಬ್ರವರಿಯಂದು ವಿಶ್ವ ಜೌಗುನೆಲ ದಿನವನ್ನು ಆಚರಿಸುವುದರ ಆಶಯವೇನು ?

(1) ಜೌಗು ನೆಲಗಳು ಮತ್ತು ಸಮರ್ಥನೀಯ ಅಭಿವೃದ್ಧಿ

(2) ಜೌಗು ನೆಲಗಳು ಮತ್ತು ಹವಾಮಾನ ಬದಲಾವಣೆ

(3) ಜೌಗು ನೆಲಗಳು ಮತ್ತು ಪರಿಸರ ವಿಜ್ಞಾನ

(4) ಜೌಗು ನೆಲಗಳು ಮತ್ತು ಅರಣ್ಯಗಳು

**71.** ಈ ಕೆಳಗಿನ ಯಾವ ಕ್ರೀಡೆಗೆ ವಾಣಿ ಕಪೂರ್ ರವರು ಸಂಬಂಧಿಸಿದ್ದಾರೆ ?

(1) ಗೋಲ್ಫ್

(2) ಬಿಲಿಯರ್ಡ್ಸ್

(3) ಕ್ರಿಕೆಟ್

(4) ಸಾಕರ್ (ಕಾಲ್ಚೆಂಡಾಟ)

**72.** ಇಂಟರ್ ಮೀಡಿಯಟ್ ಶ್ರೇಣಿ ನ್ಯೂಕ್ಲಿಯರ್ ಬಲಗಳ (INF) ಒಪ್ಪಂದವು ಇತ್ತೀಚೆಗೆ ಸುದ್ದಿಯಲ್ಲಿದ್ದು, ಇದು ಯಾವ ಕೆಳಗಿನ ದೇಶಗಳ ನಡುವಣದ್ದಾಗಿದೆ ?

(1) ಯುನೈಟೆಡ್ ಸ್ಟೇಟ್ಸ್ (ಅಮೇರಿಕಾ) ಮತ್ತು ರಷ್ಯಾ

(2) ಇಸ್ರೇಲ್ ಮತ್ತು ಪ್ಯಾಲೆಸ್ತೀನ್

(3) ಯು.ಕೆ. ಮತ್ತು ಫ್ರಾನ್ಸ್

(4) ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ

**73.** ಹಬಲ್ ಬಾಹ್ಯಾಕಾಶ ದೂರದರ್ಶಕವು ಒಂದು ಹೊಸ ಕುಬ್ಜ ನಿಹಾರಿಕೆಯನ್ನು ಅನಿರೀಕ್ಷಿತವಾಗಿ ನಮ್ಮ ಕಾಸ್ಮಿಕ್ (ಬ್ರಹ್ಮಾಂಡದ) ನೆರೆಯಲ್ಲಿಯೇ ಸಂಶೋಧನೆ ಮಾಡಿರುವುದು

(1) ಆರ್ಯ - I

(2) ಬೇಡಿನ್ I

(3) ವಾಸ್ಕೊ – III

(4) ದೇವ

**74.** ಇದು ಔಷಧಿಗಳ ಬೆಲೆ ನಿಯಂತ್ರಣ ಆದೇಶ (PMRU) ದಡಿ ಆವಶ್ಯಕ ಔಷಧಿಗಳು ಮತ್ತು ವೈದ್ಯಕೀಯ ಸಾಧನಗಳ ಬೆಲೆಗಳ ಉಲ್ಲಂಘನೆಯ ಜಾಡು ಹಿಡಿಯಲಿಕ್ಕಾಗಿ, ಒಂದು ರಾಜ್ಯವು ಇತ್ತೀಚೆಗೆ ಬೆಲೆ ನಿಯಂತ್ರಣ ಮತ್ತು ಸಂಶೋಧನಾ ಘಟಕ (DPCO) ವನ್ನು ಸ್ಥಾಪಿಸಿದ್ದು, ಆ ರಾಜ್ಯವನ್ನು ಹೆಸರಿಸಿ.

(1) ಕರ್ನಾಟಕ

(2) ಕೇರಳ

(3) ತಮಿಳುನಾಡು

(4) ಮಹಾರಾಷ್ಟ್ರ

**75.** "ದಿ ಪ್ರಿನ್ಸ್" ನ ಸೃಷ್ಟಿಕರ್ತ ಯಾರು ?

(1) ದಾಂತೆ

(2) ಮೆಕ್ಯಾವಲಿ

(3) ರಬೇಲಿಯಸ್

(4) ಸರ್ವಂತಾಸ್



downloaded from: www.kpscvaani.com
Scanned by CamScanner

76. ಅಂತರರಾಷ್ಟ್ರೀಯ ಹಣಕಾಸು ನಿಧಿಯ (IMF) ಕೇಂದ್ರಸ್ಥಾನವು ಎಲ್ಲಿ ನೆಲೆಯಾಗಿದೆ ?

(1) ಜಿನೀವಾ

(2) ವಿಯೆನ್ನಾ

(3) ನ್ಯೂಯಾರ್ಕ್

(4) ವಾಷಿಂಗ್‌ಟನ್ ಡಿ.ಸಿ.

77. ತಲಕಾವೇರಿ ವನ್ಯಜೀವಿ ಅಭಯಾರಣ್ಯವು ಎಲ್ಲಿ ನೆಲೆಸಿದೆ ?

(1) ಶಿವಮೊಗ್ಗ

(2) ಮಂಡ್ಯ

(3) ಉತ್ತರ ಕನ್ನಡ

(4) ಕೊಡಗು

78. ಜೂಡೆ ಫೆಲಿಕ್ಸ್‌ರು ಈ ಕೆಳಗಿನ ಯಾವ ಕ್ರೀಡೆಯೊಂದಿಗೆ ಸಂಬಂಧಿಸಿದ್ದಾರೆ ?

(1) ಕ್ರಿಕೆಟ್

(2) ಸ್ಕ್ವಾಶ್

(3) ಹಾಕಿ

(4) ಬಿಲಿಯರ್ಡ್ಸ್

79. "ಇಂಗ್ಲೀಷ್ ಆಗಸ್ಟ್" : ಒಂದು ಭಾರತೀಯ ಕಥೆ. ಈ ಪುಸ್ತಕದ ಲೇಖಕರು ಯಾರು ?

(1) ವಿಕ್ರಮ್ ಸೇಠ್

(2) ಉಪಮನ್ಯು ಚಟರ್ಜಿ

(3) ಕಿರಣ್ ದೇಸಾಯಿ

(4) ಜಂಪಾ ಲೆಹರಿ

80. ಪಟ್ಟಿ-I ನ್ನು ಪಟ್ಟಿ –II ರೊಂದಿಗೆ ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| A. ರಾಮಾನುಜಾಚಾರ್ಯ | I. ಶುದ್ಧಾದ್ವೈತ |
| B. ಮಧ್ವಾಚಾರ್ಯ | II. ದ್ವೈತಾದ್ವೈತ |
| C. ನಿಂಬಕಾಚಾರ್ಯ | III. ದ್ವೈತ |
| D. ವಲ್ಲಭಾಚಾರ್ಯ | IV. ವಿಶಿಷ್ಟಾದ್ವೈತ |

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | A | B | C | D |
|---|---|---|---|---|
| (1) | IV | III | II | I |
| (2) | I | II | III | IV |
| (3) | III | I | IV | II |
| (4) | II | IV | I | III |

81. ಪಟ್ಟಿ-I ರಲ್ಲಿನ ಪರ್ವತ ಕಣಿವೆಗಳನ್ನು ಪಟ್ಟಿ-II ರಲ್ಲಿನ ಅವುಗಳು ನೆಲೆಸಿರುವ ರಾಜ್ಯಗಳೊಂದಿಗೆ ಹೊಂದಿಸಿರಿ.

| ಪಟ್ಟಿ-I (ಪರ್ವತ ಕಣಿವೆ) | ಪಟ್ಟಿ-II (ರಾಜ್ಯ) |
|---|---|
| A. ದಿಹಾಂಗ್ | I. ಸಿಕ್ಕಿಂ |
| B. ಖಿರಡುಂಗ ಲಾ | II. ಜಮ್ಮು ಮತ್ತು ಕಾಶ್ಮೀರ |
| C. ಜೆಲೆಪ್ ಲಾ | III. ಹಿಮಾಚಲ ಪ್ರದೇಶ |
| D. ಡೆಬ್ಸಾ | IV. ಅರುಣಾಚಲ ಪ್ರದೇಶ |

ಮೇಲಿನವುಗಳಲ್ಲಿ ಯಾವುದು/ವು ಸರಿಯಾಗಿದೆ ? ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | A | B | C | D |
|---|---|---|---|---|
| (1) | II | I | IV | III |
| (2) | II | IV | III | I |
| (3) | IV | II | III | I |
| (4) | IV | II | I | III |



downloaded from: www.kpscvaani.com
Scanned by CamScanner

**82.** ಈ ಕೆಳಗಿನ ಯಾವ ದೇಶದಲ್ಲಿ 'ಇಪ್‌ಸ್ವಿಚ್' ಕಲ್ಲಿದ್ದಲು ಗಣಿಯ ನಿಕ್ಷೇಪವಿದೆ ?

(1) ಅಮೇರಿಕಾ ಸಂಯುಕ್ತ ಸಂಸ್ಥಾನ

(2) ಚೀನಾ

(3) ಆಸ್ಟ್ರೇಲಿಯಾ

(4) ಭಾರತ

**83.** ವರ್ಗಾವಣೆ ಬೇಸಾಯಕ್ಕೆ ವಿವಿಧ ದೇಶಗಳಲ್ಲಿ ವಿವಿಧ ಹೆಸರುಗಳಿರುವುದು ತಿಳಿದು ಬಂದಿದೆ. ಈ ಕೆಳಗಿನ ಯಾವ ದೇಶದಲ್ಲಿ ಅದನ್ನು ರೋಕಾ ಎಂದು ಕರೆಯಲಾಗಿದೆ ?

(1) ಬ್ರೆಜಿಲ್

(2) ವಿಯೆಟ್ನಾಂ

(3) ಮಧ್ಯ ಅಮೇರಿಕಾ

(4) ಇಂಡೋನೇಶಿಯಾ

**84.** ಒಬ್ಬ ಸಾರ್ವಜನಿಕ ನೌಕರನು ಸಾರ್ವಜನಿಕ ಕರ್ತವ್ಯಗಳನ್ನು ಮಾಡಲು ವಿಫಲನಾದಲ್ಲಿ ಈ ಕೆಳಗಿನ ಯಾವ ರಿಟ್‌ನ್ನು ನ್ಯಾಯಾಲಯವು ಜಾರಿ ಮಾಡಬಹುದು ?

(1) ರಿಟ್ ಆಫ್ ಸೆರ್ಷಿಯೋರಿ

(2) ರಿಟ್ ಆಫ್ ಹೇಬಿಯಸ್ ಕಾರ್ಪಸ್

(3) ರಿಟ್ ಆಫ್ ಮ್ಯಾಂಡಮಸ್

(4) ರಿಟ್ ಆಫ್ ಖೋ – ವಾರಂಟೋ

**85.** ಪಟ್ಟಿ-I ರಲ್ಲಿ ನ ಪ್ರಾಣಿಗಳೊಂದಿಗೆ ಪಟ್ಟಿ-II ರಲ್ಲಿನ ಅವುಗಳ ವನ್ಯಜೀವಿ ಅಭಯಧಾಮಗಳನ್ನು ಹೊಂದಿಸಿರಿ.

| ಪಟ್ಟಿ – I (ಪ್ರಾಣಿಗಳು) | ಪಟ್ಟಿ – II (ವನ್ಯಜೀವಿ ಅಭಯಧಾಮ) |
|---|---|
| A. ಚಿಂಕಾರ | I. ರಾಣೆಬೆನ್ನೂರು |
| B. ಬ್ಲಾಕ್ ಬಕ್ | II. ದಾರೋಜಿ |
| C. ನಾಲ್ಕು ಕೊಂಬಿನ ಜಿಂಕೆ | III. ರಂಗಯ್ಯನದುರ್ಗ |
| D. ಸ್ಲಾತ್ ಕರಡಿ | IV. ಯಡಹಳ್ಳಿ |

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ.

| | A | B | C | D |
|---|---|---|---|---|
| (1) | II | III | I | IV |
| (2) | IV | I | III | II |
| (3) | I | IV | II | III |
| (4) | I | II | III | IV |

**86.** ಕೆಳಗಿನ ಯಾವ ತಿದ್ದುಪಡಿಗಳಿಂದ, ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳಿಂದ ತೆಗೆದು ಹಾಕಲಾಯಿತು ?

(1) 24 ನೇ ತಿದ್ದುಪಡಿ

(2) 42 ನೇ ತಿದ್ದುಪಡಿ

(3) 44 ನೇ ತಿದ್ದುಪಡಿ

(4) 25 ನೇ ತಿದ್ದುಪಡಿ

**87.** ಭಾರತೀಯ ಸಂವಿಧಾನದ 352 ನೇ ಅನುಚ್ಛೇದದಡಿ ತುರ್ತು ಪರಿಸ್ಥಿತಿಯು ಘೋಷಿತವಾಗಿದ್ದಾಗ ಈ ಕೆಳಗಿನ ಯಾವುದು ಸರಿಯಲ್ಲ ?

(1) ಕೇಂದ್ರದ ಕಾರ್ಯಾಂಗೀಯ ಅಧಿಕಾರದ ವಿಸ್ತರಣೆ

(2) ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ತೆಗೆದುಕೊಳ್ಳಬಹುದು.

(3) ಪಾರ್ಲಿಮೆಂಟ್‌ನ (ಸಂಸತ್ತಿನ) ಶಾಸಕಾಂಗ ಅಧಿಕಾರದ ವಿಸ್ತರಣೆ.

(4) ಲೋಕಸಭೆಯ ಅವಧಿಯ ವಿಸ್ತರಣೆ



downloaded from: www.kpscvaani.com
Scanned by CamScanner

88. 'ಗಡಸು ಕರೆನ್ಸಿ' ಎಂದರೇನು ?

(1) ಅದರ ಮೌಲ್ಯವನ್ನು ಅತಿ ವೇಗವಾಗಿ ಕಳೆದುಕೊಳ್ಳುತ್ತಿರುವ ಕರೆನ್ಸಿ

(2) ಅದನ್ನು ಅಂತರರಾಷ್ಟ್ರೀಯ ವ್ಯವಹಾರಗಳಿಗೆ ಬಳಸಲಾಗದು.

(3) ಅದು ಒಂದು ಅಂಕೀಯ ಕರೆನ್ಸಿಯಾಗಿದೆ.

(4) ಅದು ಹಠಾತ್ತಾಗಿ ಕುಸಿತಕ್ಕೊಳಗಾಗದಿರುವ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತ್ಯಂತ ದ್ರವ್ಯವಾಗಿರುವಂತಹುದು.

89. ಸ್ವಾಮಿ ದಯಾನಂದ ಸರಸ್ವತಿಯವರ ಮೂಲ ಹೆಸರೇನು ?

(1) ಅಭಿಶಂಕರ್

(2) ಗೌರಿಶಂಕರ್

(3) ಮೂಲ ಶಂಕರ್

(4) ದಯಾಶಂಕರ್

90. ಈ ಕೆಳಗಿನ ಯಾವ ಕೇಂದ್ರಾಡಳಿತ ಪ್ರದೇಶವು ವಿಸ್ತೀರ್ಣದಲ್ಲಿ ಅತ್ಯಂತ ಕಿರಿದಾದುದು ?

(1) ಚಂಡೀಘರ್

(2) ದಾಮನ್ ಮತ್ತು ದಿಯು

(3) ದಾದ್ರಾ ಮತ್ತು ನಗರ್ ಹವೇಲಿ

(4) ಲಕ್ಷದ್ವೀಪ್

91. ಈ ಕೆಳಗಿನವುಗಳಲ್ಲಿ ಯಾವುದು ಮಿಜೋರಾಂ ನೊಂದಿಗೆ ಗಡಿಯನ್ನು ಹೊಂದಿಲ್ಲ ?

(1) ನಾಗಾಲ್ಯಾಂಡ್

(2) ಮಯನ್ಮಾರ್

(3) ಅಸ್ಸಾಂ

(4) ತ್ರಿಪುರಾ

92. ಭಾರತದಲ್ಲಿ ಅತ್ಯಧಿಕವಾಗಿ ಮ್ಯಾಂಗನೀಸ್‌ನ್ನು ಉತ್ಪಾದಿಸುವ ರಾಜ್ಯ ಕೆಳಗಿನವುಗಳಲ್ಲಿ ಯಾವುದು ?

(1) ಮಧ್ಯಪ್ರದೇಶ

(2) ಆಂಧ್ರ ಪ್ರದೇಶ

(3) ಉತ್ತರ ಪ್ರದೇಶ

(4) ಓರಿಸ್ಸಾ

93. ಈ ಕೆಳಗಿನ ಯಾವ ನದಿಯ ಮೇಲೆ ಹಿರಾಕುಡ್ ಅಣೆಕಟ್ಟನ್ನು ನಿರ್ಮಿಸಲಾಗಿದೆ ?

(1) ಮಹಾನದಿ

(2) ಗೋದಾವರಿ

(3) ಕಾವೇರಿ

(4) ಪೆರಿಯಾರ್



downloaded from: www.kpscvaani.com
Scanned by CamScanner

94. ಈ ಕೆಳಗಿನವುಗಳಲ್ಲಿ ಯಾವ ದೇಶವು ಸಾರ್ಕ್‌ನ (ಸೌತ್ ಏಷ್ಯಾ ಅಸೋಸಿಯೇಶನ್ ಫಾರ್ ರೀಜನಲ್ ಕೋ ಆಪರೇಷನ್) ಸಂಸ್ಥಾಪಕ ಸದಸ್ಯನಾಗಿಲ್ಲ ?

(1) ಮಯನ್ಮಾರ್ (2) ಮಾಲ್ಡೀವ್ಸ್
(3) ಅಫ್ಘಾನಿಸ್ತಾನ (4) ಭೂತಾನ್

95. ಭಾರತದ ವಿಘಟನೆಯ ಬಾಲ್ಕನ್ ಯೋಜನೆಯನ್ನು ಸಿದ್ಧಪಡಿಸಿದವರಾರು ?

(1) ವಿಲ್ಸನ್ ಚರ್ಚಿಲ್
(2) ಎಂ. ಎ. ಜಿನ್ನಾ
(3) ಲಾರ್ಡ್ ಮೌಂಟ್ ಬ್ಯಾಟನ್
(4) ವಿ.ಪಿ. ಮೆನನ್

96. ಮನುಷ್ಯನ ಮೂತ್ರಪಿಂಡದಲ್ಲಿ ಕಲ್ಲುಗಳು ರಚಿತವಾಗುವುದು ಅತ್ಯಧಿಕವಾಗಿ ಇವುಗಳನ್ನು ಹೊಂದಿರುವುದು ?

(1) ಕ್ಯಾಲ್ಸಿಯಂ ಆಕ್ಸಲೇಟ್
(2) ಸೋಡಿಯಂ ಅಸಿಟೇಟ್
(3) ಮೆಗ್ನೀಷಿಯಂ ಸಲ್ಫೇಟ್
(4) ಕ್ಯಾಲ್ಸಿಯಂ

97. ಈ ಕೆಳಗಿನವುಗಳಲ್ಲಿ ಲೋಮನಾಳಿಯತೆಯೊಂದೇ ಕಾರಣವಾಗದ್ದು ಯಾವುದು ?

(1) ಶಾಯಿಯ ಬ್ಲಾಟಿಂಗ್
(2) ಭೂ ಅಂತರ್ಗತ ಜಲದ ಮಟ್ಟದ ಏರುವಿಕೆ
(3) ಒಂದು ಹತ್ತಿಯ ಬಟ್ಟೆಯ ಮೇಲೆ ನೀರಿನ ಹನಿಯ ಹರಡುವಿಕೆ
(4) ಒಂದು ಸಸ್ಯದಲ್ಲಿ ನೀರಿನ ಹನಿಯು ಬೇರುಗಳಿಂದ ಅದರ ಫಾಯ್ಲೇಜ್‌ಗಳಿಗೆ ವಿತರಿಕೆ

98. ಒಂದು ಸಂಖ್ಯೆಯ $\frac{2}{3}$ ಭಾಗವು ಸಂಖ್ಯೆಯ $\frac{5}{9}$ ಕ್ಕಿಂತ 6 ಅಧಿಕವಾಗಿದೆ. ಆ ಸಂಖ್ಯೆಯನ್ನು ಕಂಡು ಹಿಡಿಯಿರಿ.

(1) 22
(2) 36
(3) 54
(4) 50

99. ನ್ಯೂಟನ್ ನ ಗುರುತ್ವಾಕರ್ಷಣೆಯ ನಿಯಮವನ್ನು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಅನ್ವಯಿಸಲಾಗಿದೆ ?

(1) ಭೂಮಿ ಮತ್ತು ಸೂರ್ಯನ ನಡುವಣ ಬಲ ಮಾತ್ರ
(2) ಭೂಮಿ ಮತ್ತು ಚಂದ್ರನ ನಡುವಣ ಬಲ ಮಾತ್ರ
(3) ಭೂಮಿ ಮತ್ತು ಇತರ ಕಾಯ ನಡುವಣ ಬಲ ಮಾತ್ರ
(4) ಬ್ರಹ್ಮಾಂಡದಲ್ಲಿರುವ ಯಾವುದೇ ಎರಡು ಕಾಯಗಳ ನಡುವಣ ಬಲ

100. ಭಾರತೀಯ ರಿಸರ್ವ್ ಬ್ಯಾಂಕ್‌ನ ತೆರೆದ ಮಾರುಕಟ್ಟೆಯ ಕಾರ್ಯಾಚರಣೆಗಳು ಇದಕ್ಕೆ ಸಂಬಂಧಿಸಿದೆ

(1) ಷೇರುಗಳನ್ನು ಕೊಳ್ಳುವುದು ಮತ್ತು ಮಾರುವುದು
(2) ವಿದೇಶೀ ವಿನಿಮಯದ ಹರಾಜು
(3) ಭದ್ರತೆಗಳಲ್ಲಿ ವ್ಯಾಪಾರ
(4) ಚಿನ್ನದ ವ್ಯವಹಾರ



downloaded from: www.kpscvaani.com
Scanned by CamScanner